| | |
|---|---|
| ಪ್ರಾಸಾ | 06 |
| ಚಾಸಾ | 08 |

ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**

**<u>ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 48/2023</u>**

**ದಿನಾಂಕ: 24.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀರಾಮ್ |
| ತಂದೆಯ ಹೆಸರು | : | ಲೇಟ್ ವೆಂಕಟರವಣಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಮುದ್ದರೆಡ್ಡಿಹಳ್ಳಿ |

**<u>ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-</u>**

1. ಚಾಸಾ.1 ರಿಂದ 6 ಮತ್ತು ಚಾಸಾ.7 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ.

2. ಚಾಸಾ.1 ಮತ್ತು 2 ರವರು ನಾಯ್ಕ್ ಜಾತಿಗೆ ಸೇರಿದವರಾಗಿರುತ್ತಾರೆ. ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಚಾಸಾ. 1 ಹಾಗೂ ಆರೋಪಿತರು ರವರು ಜಮೀನಿನ್ನು ಮುದ್ದರೆಡ್ಡಿಹಳ್ಳಿಯಲ್ಲಿ ಊರಿನ ಪಕ್ಕದಲ್ಲಿ ಅಕ್ಕ-

| | |
|---|---|
| ಪ್ರಾಸಾ | 06 |
| ಚಾಸಾ | 08 |

ಪಕ್ಕ ಹೊಂದಿರುತ್ತಾರೆ.

3. ನನಗೆ ಜಗಳವಾದ ಬಗ್ಗೆ ಗೊತ್ತಿರುವುದಿಲ್ಲ. ಆದರೆ ನನ್ನ ಸಹಿಯನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>**

**4**. ನಮ್ಮ ಗ್ರಾಮದ ನಮ್ಮ ಜನಾಂಗದ ಲಕ್ಷ್ಮೀನಾರಾಯಣಪ್ಪ ರವರು ಸುಮಾರು 2 ವರ್ಷಗಳ ಹಿಂದೆ ಗ್ರಾಮದ ಹೊರಗೆ ಇರುವ ಅವರ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಅವರ ಜಮೀನಿಗೆ ಹೊಂದಿಕೊಂಡಂತೆ ವರ್ಲಗೊಂಡ ಗ್ರಾಮದ ನಾಯ್ಕ್ ಜನಾಂಗದ ವೆಂಕಟರವಣಪ್ಪ ಮತ್ತು ಅವರ ಹೆಂಡತಿ ಗೌರಮ್ಮ ರವರ ಜಮೀನು ಇರುತ್ತದೆ ಎಂದರೆ ಸರಿ. ನಂತರ ಲಕ್ಷ್ಮೀನಾರಾಯಣಪ್ಪ ರವರು ಅವರ ಮನೆಯ ಪಕ್ಕದಲ್ಲಿ ಕುರಿಗಳ ಶೆಡ್ ಅನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಶೆಡ್ ಗೌರಮ್ಮ ರವರ ಜಮೀನಿನಲ್ಲಿ ನಿರ್ಮಿಸಿರುತ್ತಾರೆ ಎಂದು ಅವರ ಮಗಳಾದ ಚಂದ್ರಕಲಾ ರವರು ಬಂದು ಲಕ್ಷ್ಮೀನಾರಾಯಣಪ್ಪ ರವರನ್ನು ಕೇಳಿದ

| | |
|---|---|
| ಪ್ರಾಸಾ | 06 |
| ಚಾಸಾ | 08 |

ವಿಚಾರದಲ್ಲಿ ಒಬ್ಬರಿಗೊಬ್ಬರಿಗೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನ ವಿಚಾರದಲ್ಲಿ ಇಬ್ಬರಿಗೂ ವೈಷಮ್ಯ ಇರುತ್ತದೆ ಎಂದರೆ ಸರಿಯಲ್ಲ. ಆದರೆ ಜಮೀನಿನ ಬಗ್ಗೆ ಕೇಸ್ ಇರುತ್ತದೆ. ದಿ.04.09.2023 ರಂದು ಮಃ12.00 ಗಂಟೆ ಸಮಯದಲ್ಲಿ ನಾನು ವರ್ಲಗೊಂಡದಿಂದ ನಮ್ಮ ಗ್ರಾಮಕ್ಕೆ ಹೋಗುತ್ತಿರುವಾಗ ಲಕ್ಷ್ಮೀನಾರಾಯಣಪ್ಪ ರವರ ಮನೆಯ ಪಕ್ಕದ ರಸ್ತೆಯಲ್ಲಿ ಜೋರು ಜೋರಾಗಿ ಮಾತನಾಡುತ್ತಾ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ಅದನ್ನು ಕಂಡ ನಾನು, ಅಲ್ಲಿಗೆ ಬಂದಿದ್ದ ನಮ್ಮ ಗ್ರಾಮದ ಚೌಡರೆಡ್ಡಿ ಮತ್ತು ನಮ್ಮ ಗ್ರಾಮದ ಸುಹಾಸ್ ರವರು ಅಲ್ಲಿಗೆ ಹೋಗಿ ನೋಡಲಾಗಿ ಚಂದ್ರಕಲಾ ರವರು ತಮ್ಮ ಜಮೀನಿನ ಬದಿಯಲ್ಲಿ ನೆಟ್ಟಿದ್ದ ಕಲ್ಲನ್ನು ಏಕೆ ಕಿತ್ತು ಹಾಕಿದ್ದು ಎಂದು ಲಕ್ಷ್ಮೀನಾರಾಯಣಪ್ಪ ಮತ್ತು ಅವರ ಮಗ ಮುನಿರಾಜು ರವರಿಗೆ ಕೇಳುತ್ತಿದ್ದಂತೆ ಲಕ್ಷ್ಮೀನಾರಾಯಣಪ್ಪ, ಆತನ ಹೆಂಡತಿ ವೆಂಕಟಲಕ್ಷ್ಮಮ್ಮ, ಅವರ ಮಗ ಮುನಿರಾಜು, ಅವರ ಹೆಂಡತಿ ಗಾಯತ್ರಿ, ತಮ್ಮ ಪ್ರಭಾಕರ, ಅವರ ಹೆಂಡತಿ ಮಂಜುಳಾರವರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಆ ಪೈಕಿ ಮುನಿರಾಜು ರವರು ಚಂದ್ರಕಲಾ ರವರನ್ನು ಕುರಿತು ಏ ನಾಯ್ಕ್ ಜಾತಿ ಮುಂಡೆ, ನಿಮ್ಮ ಜಮೀನಿನಲ್ಲಿ ನಾವು ಬರದೇ ಇದ್ದರು ನಮ್ಮ ಬಳಿ ಬಂದು ಗಲಾಟೆ ಮಾಡುತ್ತೀಯಾ, ಕಡಿಮೆ ಜಾತಿಯವರಿಗೆ ಕಡಿಮೆ ಬುದ್ಧಿ ಇರುತ್ತದೆ ಎಂದು ಅವಾಚ್ಯ ಶಬ್ಧಗಳಿಂದ ಜಾತಿ ನಿಂದನೆ ಮಾಡಿರುತ್ತಾರೆ

| | |
|---|---|
| ಪ್ರಾಸಾ | 06 |
| ಚಾಸಾ | 08 |

ಎಂದರೆ ಸರಿಯಲ್ಲ. ಇನ್ನುಳಿದವರು ಸಹ ಚಂದ್ರಕಲಾ ರವರನ್ನು ಕುರಿತು ಇವರಿಗೆ ಬೇರೆ ಏನು ಕೆಲಸವಿಲ್ಲ, ಪದೇ ಪದೇ ಜಮೀನು ವಿಚಾರಕ್ಕೆ ಗಲಾಟೆ ಮಾಡುತ್ತಿರುತ್ತಾರೆ, ಇನ್ನೊಮ್ಮೆ ಬಂದರೆ ಮುಗಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದನ್ನು ಕಂಡ ನಾನು, ನಮ್ಮ ಗ್ರಾಮದ ಚೌಡರೆಡ್ಡಿ ಹಾಗೂ ಸುಹಾಸ್ ಪಕ್ಕದ ಜಮೀನಿನ ಅನಿತಾ, ಶ್ರೀನಿವಾಸ್ ರವರು ಗಲಾಟೆಯನ್ನು ಬಿಡಿಸಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ.

5. ಅದೇ ರೀತಿ ಲಕ್ಷ್ಮೀನಾರಾಯಣಪ್ಪ ಮತ್ತು ಅವರ ಕಡೆಯವರಿಗೆ ಮತ್ತು ಚಂದ್ರಕಲಾ ರವರಿಗೆ ಜಮೀನಿನ ವಿಚಾರದಲ್ಲಿ ತಕರಾರುಗಳು ಇದ್ದು, ಲಕ್ಷ್ಮೀನಾರಾಯಣಪ್ಪ ಮತ್ತು ಅವರ ಕಡೆಯವರು ಚಂದ್ರಕಲಾ ರವರ ಜಮೀನಿನ್ನು ಒತ್ತುವರಿ ಮಾಡಿ ಅತಿಕ್ರಮವಾಗಿ ಶೆಡ್ ಅನ್ನು ನಿರ್ಮಿಸಿಕೊಂಡಿದ್ದನ್ನು ಕೇಳಲು ಹೋದ ಚಂದ್ರಕಲಾ ರವರು ಪರಿಶಿಷ್ಟ ಪಂಗಡ ನಾಯ್ಕ್ ಜನಾಂಗಕ್ಕೆ ಸೇರಿದವರು ಎಂದು ಒಕ್ಕಲಿಗೆ ಜನಾಂಗಕ್ಕೆ ಸೇರಿದ ಆರೋಪಿಗಳಿಗೆ ಗೊತ್ತಿದ್ದು ಉದ್ದೇಶಪೂರ್ವಕವಾಗಿ ಗುಂಪು ಕಟ್ಟಿಕೊಂಡು ಜಾತಿ ನಿಂದನೆ ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿ ದೌರ್ಜನ್ಯ ಎಸೆಗಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ದಿ.13.10.2023 ರಂದು ತನಿಖಾಧಿಕಾರಿಗೆ "ದಿನಾಂಕ 04.09.2023 ರಂದು ............................ದೌರ್ಜನ್ಯ

| | |
|---|---|
| ಪ್ರಾಸಾ | 06 |
| ಚಾಸಾ | 08 |

ಎಸೆಗಿರುತ್ತಾರೆ” ಎಂದು ಈಗ ಓದಿ ಹೇಳಿದಂತೆ ನಿಪಿ-12 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಊರಿನವರು ಆಗಿರುವ ಕಾರಣ, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ವಿ.ಎಮ್.ಎಸ್ ವಕೀಲರಿಂದ:</u>**

6. ಲಕ್ಷ್ಮೀನಾರಾಯಣಪ್ಪ ರವರು ಸದರಿ ಸ್ಥಳದಲ್ಲಿ ಮನೆಯನ್ನು ಕಟ್ಟಿ ಸುಮಾರು 15-20 ವರ್ಷಗಳಾಗಿರುತ್ತದೆ ಎಂದರೆ ಸರಿ. ಅದೇ ಸಮಯದಲ್ಲಿ ಅವರು ಕುರಿ ಶೆಡ್ ಅನ್ನು ಸಹ ಕಟ್ಟಿರುತ್ತಾರೆ ಎಂದರೆ ಸರಿ.

**<u>ಮರುವಿಚಾರಣೆ: ಇಲ್ಲ.</u>**

**(ದಿನಾಂಕ: 24.12. 2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**